**ದಿನಾಂಕಃ 03.09.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.**

**ಮುಂದುವರೆದ ಪಾಟೀ ಸವಾಲುಃ ಪ್ರತಿವಾದಿಗಳ ಪರ ವಕೀಲರಿಂದಃ**

ದಾವಾ ಸ್ವತ್ತಿನ ಮೂಲ ದಾಖಲಾತಿಯನ್ನು ಪರಿಶೀಲಿಸಿರುವು ದಿಲ್ಲ. ನನಗೆ ಪರಿಶೀಲನೆ ಮಾಡಲು ತೊಂದರೆ ಇರಲಿಲ್ಲ. ಕೆಂಪಮ್ಮ ಯಾರು ಎಂದು ಗೊತ್ತಿಲ್ಲ. ಕೆಂಪಮ್ಮ ರವರು ಎ.ಸಿ ನ್ಯಾಯಾಲಯದಲ್ಲಿ ಅಪೀಲನ್ನು ಸಲ್ಲಿಸಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಮೂರನೇ ಪ್ರತಿವಾದಿಗೆ ಮಂಜೂರಾದ ದಾವಾ ಸ್ವತ್ತನ್ನು ಪ್ರಶ್ನಿಸಿ ಎ.ಸಿ ನ್ಯಾಯಾಲಯದಲ್ಲಿ ಅಪೀಲನ್ನು ಸಲ್ಲಿಸಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಆದ್ದರಿಂದ ಮೂರನೇ ಪ್ರತಿವಾದಿ ಸ್ವಾಧೀನಾನುಭವದಲ್ಲಿದ್ದು ಈ ಲಗಾಯ್ತು ಅನುಭವಿಸಿಕೊಂಡು ಬರುತ್ತಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಮೂರನೇ ಪ್ರತಿವಾದಿ ಸ.ನಂ.60 ಕ್ಕೆ ಬ್ಯಾಂಕ್ ಗೆ ಆದಾರವಾಗಿದ್ದು 150 ತೆಂಗಿನ ಸಸಿಗಳನ್ನು ನೆಟ್ಟಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಕೆಂಪಮ್ಮರವರು ಎ.ಸಿ ನ್ಯಾಯಾಲಯದ ಅದೇಶವನ್ನು ಪ್ರಶ್ನಿಸಿ ಡಿ.ಸಿ ನ್ಯಾಯಾಲಯದಲ್ಲಿ ಆರ್.ಎ ನಂ.61/1991-92 ರಂತೆ ಸಲ್ಲಿಸಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಅದು ವಜಾ ಆಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಕೆಂಪಮ್ಮ ರವರು ದಾವಾ ಸ್ವತ್ತಿನಲ್ಲಿ ಸ್ವಾಧೀನದಲ್ಲಿ ಇಲ್ಲದಿದ್ದರೂ ಸಹ 16.03.1987 ರಲ್ಲಿ ವಾದಿ ಹಾಗೂ ಕೆಂಪಮ್ಮ ರವರು ಶರೀಕಾಗಿ ಮೋಸದಿಂದ ಕ್ರಯಪತ್ರ ಸೃಷ್ಟಿಸಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಈ ಕೇಸಿನಲ್ಲಿ ಒಂದನೇ ಪ್ರತಿವಾದಿ ಕೆಂಪಮ್ಮರವರಾಗಿದ್ದು ಅವರಿಗೆ ನ್ಯಾಯಾಲಯದಿಂದ ನೊಟೀಸ್ ಜಾರಿಯಾಗಿರುವುದಿಲ್ಲ ಎಂದರೆ ನನಗೆ ಈ ಕೇಸ್ ಇದ್ದದೇ೮ದ ನನಗೆ ಗೊತ್ತಿಲ್ಲ ನ್ಯಾಯಾಲಯದಿಂದ ನೊಟೀಸ್ ಬಂದ ನಂತರ ನ್ಯಾಯಾಲಯಕ್ಕೆ ಹಾಜರಾಗಿರುತ್ತೇನೆ. ನನ್ನ ವ್ಯವಹಾರ ಚನ್ನರಾಯಪಟ್ಟಣದಲ್ಲಿ ಇರುತ್ತದೆ ಎಂದರೆ ಸರಿ. ನಾನು ಬೆಳೆದಿದ್ದು ಹಡೇನಹಳ್ಳಿ ಚನ್ನರಾಯಪಟ್ಟಣದಲ್ಲಿ ಲಕ್ಷ್ಮೀವಿಲಾಸ ರಸ್ತೆ ಎಂದು ಇದೆಯಾ ಎಂದರೆ ಸಾಕ್ಷಿ ನನಗೆ ಚನ್ನರಾಯಪಟ್ಟಣದ ಬಗ್ಗೆ ಅಷ್ಟು ಗೊತ್ತಿರುವುದಿಲ್ಲ ಎನ್ನುತ್ತಾರೆ. ಚನ್ನರಾಯಪಟ್ಟಣದಲ್ಲಿ

ಪುರಸಭೆ ವ್ಯಾಪ್ತಿಗೆ ಸಂಬಂಧಿಸಿದಂತೆ ಯಾವುದೇ ಲಕ್ಷ್ಮಿವಿಲಾಸ ರಸ್ತೆ ಇರುವುದಿಲ್ಲ ಎಂದರೆ ನನಗೆ ಗೊತ್ತಿಲ್ಲ. ಯಾವುದೇ ನ್ಯಾಯಾಲಯದಲ್ಲಿ ಕೆಂಪಮ್ಮ ಹಾಜರಾಗಿರುವುದಿಲ್ಲ ಎಂದರೆ ನನಗೆ ಗೊತ್ತಿಲ್ಲ. ಮಂಜೂರಾತಿ ಬಗ್ಗೆ ಅನುಮಾನಸ್ಪದವಾಗಿದೆ ಎಂದರೆ ಸರಿಯಲ್ಲ. ಮಂಜೂರಾತಿ ಆದೇಶದಲ್ಲಿ ಕೆಂಪಮ್ಮರವರ ತಂದೆಯ ಹೆಸರಾಗಲೀ ಪತಿಯ ಹೆಸರು ನಮೂದಾಗಿರುವುದಿಲ್ಲ ಎಂದರೆ ಸರಿಯಲ್ಲ. 16.03.1987ರ ಕ್ರಯಪತ್ರದಲ್ಲಿ ಕೆಂಪಮ್ಮರವರ ವಿಳಾಸದಲ್ಲಿ ಚನ್ನರಾಯಪಟ್ಟಣ, ಹಿರಿಸಾವೆ , ಮತ್ತಿಘಟ್ಟ ಗ್ರಾಮ ಎಂದು ನಮೂದು ಇದ್ದು ಅಲ್ಲಿ ಅವರು ವಾಸವಾಗಿರುವುದಿಲ್ಲ ಎಂದರೆ ಅದರ ಬಗ್ಗೆ ನನಗೆ ಗೊತ್ತಿಲ್ಲ. ಕೆಂಪಮ್ಮ ರವರು ಮತ್ತಿಘಟ್ಟ ಗ್ರಾಮದಲ್ಲಿ ಹುಟ್ಟಿರುವುದಿಲ್ಲ ಸುಳ್ಳು ವಿಳಾಸ ನೀಡಲಾಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ.

ಮೂರನೇ ಪ್ರತಿವಾದಿ ವಾದಿ ಮತ್ತು ಕೆಂಪಮ್ಮನ ವಿರುದ್ಧ ಅಸಲು ದಾವೆ 126/1990 ನ್ನು ಸಲ್ಲಿಸಿ ಡಿಕ್ರಿಯನ್ನು ಪಡೆದುಕೊಂಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಅದರಲ್ಲಿ 3ನೇ ಪ್ರತಿವಾದಿ 5 ಎಕರೆಯಲ್ಲಿ ಸ್ವಾಧೀನದಲ್ಲಿದ್ದು ಅದರಲ್ಲಿ 3 ಎಕರೆ ತಹಶೀಲ್ದಾರಿರಿಂದ ಮಂಜೂರಾಗಿದ್ದು ಉಳಿದ 2 ಎಕರೆಗೂ ಅವರೇ ಸ್ವಾದೀನದಲ್ಲಿ ಇರುತ್ತಾರೆ ಎಂದರೆ ಈಗ ಅವರು ಸ್ವಾಧೀನ ಇರುವುದಿಲ್ಲ . ಈಗಲೂ ಅವರೇ ಸ್ವಾಧೀನದಲ್ಲಿದ್ದಾರೆ ನೀವು ಸುಳ್ಳು ಹೇಳುತ್ತಿದ್ದೀರಿ ಎಂರದೆ ಎಂದರೆ ಸರಿಯಲ್ಲ, 3 ನೇ ಪ್ರತಿವಾದಿ ದಿಃ 31.08.1972 ರಲ್ಲಿ ಸರ್ಕಾರವವು ಎನ್.ಸಿ ಆರ್ 134/1972-73 ರಲ್ಲಿ ಮಂಜೂರಾತಿ ಮಾಡಿಕೊಡಲಾಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ದಿಃ31.08.1983 ರಲ್ಲಿ ಚನ್ನರಾಯಪಟ್ಟಣದ ತಹಶೀಲ್ದಾರರು ಸಾಗುವಳಿ ಚೀಟಿ ಕೊಟ್ಟಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಮೂರನೇ ಪ್ರತಿವಾದಿಗೆ ಎನ್.ಸಿ.ಆರ್ 134/1972-73ರಲ್ಲಿ 26.12.1972 ರಲ್ಲಿ ನೊಟೀಸ್ ನೀಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಸದರಿ ನೊಟೀಸ್ ಪ್ರಕಾರ ವಿಚಾರಣೆಯನ್ನು ಮಾಡಲಾಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಅದರಲ್ಲಿ ಒತ್ತುವರಿ ಮಾಡಿಕೊಂಡಿರುತ್ತಾರೆ ಎಂದು ವಿಚಾರಣೆಯಲ್ಲಿ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಒತ್ತುವರಿ ಮಾಡಿಕೊಂಡ ಜಾಗಕ್ಕೆ

ಚನ್ನರಾಯಪಟ್ಟಣದ ತಹಶೀಲ್ದಾರರು ಟಿ.ಟಿಯನ್ನು ಅಂದರೆ ಜುಲ್ಮಾನೆಯನ್ನು ವಿಧಿಸಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಮೂರನೇ ಪ್ರತಿವಾದಿ ದಿಃ19.07.1979 ರಲ್ಲಿ ಸ.ನಂ.60 ಕ್ಕೆ 3 ಎಕರೆ ಗೆ ಸಂಬಂದಪಟ್ಟಂತೆ ಮಹಜರ್ ಕ್ರಮ ಜರುಗಿಸಿ ಹಂಗಾಮಿ ಚೀಟಿಯನ್ನು ಚನ್ನರಾಯಪಟ್ಟಣದ ತಹಶೀಲ್ದಾರರರು ನೀಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. 31.08.1984 ರಲ್ಲಿ ದಾವಾ ಸ್ವತ್ತಿಗೆ 3 ಎಕರೆ ಜಮೀನಿಗೆ ಕಾಯಂ ಸಾಗುವಳಿ ಚೀಟಿ ನೀಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ನನಗೆ ಅಸಲು ದಾವಾ ಸಂ.257/2002 ದಾವಾದ ವಿಚಾರ ನನಗೆ ತಿಳಿದಿರುವುದಿಲ್ಲ. ಅದು ಸಿವಿಲ್ ಜಡ್ಜ್ ನ್ಯಾಯಾಲಯದಲ್ಲಿ ವಜಾ ಆಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಸರ್ಕಾರಿ ಗೋಮಾಳು ಎಷ್ಟು ಎಕರೆ ಇರುತ್ತದೆ ಎಂದು ನನಗೆ ಗೊತ್ತಿಲ್ಲ. ಒಟ್ಟು 137 ಎಕರೆ 10 ಗುಂಟೆ ಇರುತ್ತದೆ ಎಂದರೆ ನನಗೆ ಗೊತ್ತಿಲ್ಲ. 3ನೇ ಪ್ರತಿವಾದಿಗೆ ಸೇರಿದ ಜಮೀನು ಕೆಂಪಮ್ಮರವರಿಗೆ ಸೇರಿದ್ದಲ್ಲವೆಂದು ಆರ್.ಎ 14/1984-85 ರಲ್ಲಿ ಆದೇಶವಾಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಸದರಿ 60 ಬ್ಲಾಕ್ ನಂ.60/11, ಅದನ್ನು 106/1 ಎಂದು ದುರುಸ್ತಿ ಕಾನೂನುಬಾಹಿರವಾಗಿ ಮಾಡಿಕೊಂಡಿರುತ್ತಾರೆ ಎಂದರೆ ನಾನು ದಾಖಲೆಗಳನ್ನು ತೆಗೆದುಕೊಳ್ಳುವಾಗ ಸರಿಯಾಗಿತ್ತು ಎಂದು ನುಡಿಯುತ್ತಾರೆ. ನಾನು ಯಾವುದೇ ದಾಖಲೆಗಳನ್ನು ಪರಿಶೀಲನೆ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಬರೆಸಿಕೊಂಡ ಕ್ರಯಪತ್ರದಲ್ಲಿ ಈ ಕೇಸಿನ ವಿಚಾರವಾಗಿ ಅಥವಾ ಆರ್.ಎಸ್.ಎ ಮತ್ತು ಅಸಲು ದಾವಾ 126/1990ರ ವಿಚಾರವಾಗಿ ನಮೂದುಮಾಡಲಾಗಿರುತ್ತದೇಯೇ ಎಂದರೆ ದಾಖಲಾತಿ ನೋಡಿ ಹೇಳಬಾಕಾಗುತ್ತದೆ ಎಂದು ನುಡಿಯುತ್ತಾರೆ. ನಾನು ಕೇಸಿನ ಬಗ್ಗೆ ಪರಿಶೀಲನೆ ಮಾಡಿರುವುದಿಲ್ಲ. ದಾಖಲಾತಿಗಳನ್ನು ನೋಡಿ ಪಡೆದುಕೊಂಡಿರುತ್ತೇನೆ. ಮೂರನೇ ಪ್ರತಿವಾದಿ ಪರ 06.08.1998 ಆರ್.ಎ 45/1997-98 ರಲ್ಲಿ ಮಂಜೂರು ಆಗಿರುತ್ತದೆ. ಪೋಡಿ ಆದೇಶ ವಜಾ ಮಾಡಿ 3 ನೇ ಪ್ರತಿವಾದಿ ಸಲ್ಲಿಸಿದ ದಾಖಲೆಗಳು ಪುರಸ್ಕೃತವಾಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ.

**ಪಾಟೀ ಸವಾಲಿಗೆ ಕಾಲಾವಾಕಾಶ ಕೋರಿದ್ದು, ಕಾಲಾವಾಕಾಶ ನೀಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಸಾಕ್ಷ್ಯವನ್ನು ನನ್ನ ಉಕ್ತಲೇಖನದಂತೆ ಗಣಕೀಕರಣಗೊಳಿಸಿ ಮುದ್ರಿಸಲಾಯಿತು.)

ಓ ಹೇ ಕೇ ಸರಿ ಇದೆ

ಸಹಿ/-

ಹಿರಿಯ ಸಿವಿಲ್ ಜಡ್ಜ್ ಮತ್ತು ಜೆ ಎಂ ಎಫ್ ಸಿ

ನ್ಯಾಯಾಧೀಶರು, ಚನ್ನರಾಯಪಟ್ಟಣ